ಒಂದು ಅಗತ್ಯವಾಗಿದೆ... ನಾನು ತೀರ್ಮಾನಿಸಿದ್ದಾಯಿತು. ಹಾಗಾಗಿ ಇದನ್ನು ಬರೆಯುತ್ತಿದ್ದೇನೆ...

ಆತ್ಮಹತ್ಯೆಯ ಬಗೆಗೆ ಹಿಂದೆ ನನಗೆ ದ್ವೇಷವಿತ್ತು... ವಿಧಿಯನ್ನು ಅಣಕಿಸಲು ಹೇಡಿಗಳಾದ ಹೆಣ್ಣುಗಳು ಕಂಡುಹಿಡಿದ ಒಂದು ಉಪಾಯ ಎಂಬುದು ನನ್ನ ನಂಬಿಕೆಯಾಗಿತ್ತು. ಒಬ್ಬ ಪುರುಷ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಕೇಳಿದಾಗ ಆತ ಪುರುಷ ಪ್ರಪಂಚದೊಡನೆ ದೊಡ್ಡ ಅಪರಾಧ ಎಸಗಿದ್ದಾನೆ ಎಂದೇ ನಾನು ಹೇಳುವುದಿತ್ತು. ಪ್ರೇಮ ಭಗ್ನಗೊಂಡುದರಿಂದ ನೇಣು ಹಾಕಿಕೊಂಡು ಸತ್ತ ಪುರುಷನ ಆತ್ಮವನ್ನು ಸಾಧ್ಯವಾದರೆ ಸಾಯುವವರೆಗೆ ನೇಣು ಬಿಗಿಯಬೇಕು ಎಂದು ಹೇಳುವ ಉದ್ಧಟತನವೂ ನನಗಿತ್ತು.

...ಆದರೂ ನಾನಿಂದು ಆತ್ಮಹತ್ಯೆಯ ನಿರ್ಧಾರ ಮಾಡಿದ್ದೇನೆ...

...ನಮ್ಮ ಮನೆಯ ಎರಡನೆಯ ಅಂತಸ್ತಿನ ಈ ಕೋಣೆಯಲ್ಲಿ ನಾನು ಒಂಟಿಯಾಗಿದ್ದೇನೆ... ದಟ್ಟವಾದ ಕತ್ತಲೆಯಲ್ಲಿ ಒಂದು ತೆರಪು ಮಾಡಿಕೊಂಡು ಮೇಜಿನ ಮೇಲೆ ಈ ಮೇಣದ ಬತ್ತಿ ಮಂಕಾಗಿ ಉರಿಯುತ್ತಿದೆ...

ಈ ಕಟ್ಟಡ ಹಾಗೂ ಸುತ್ತಲ ಪರಿಸರವು ಮೌನದಲ್ಲಿ ಲಯವಾಗಿದೆ... ಎಂತಹಾ ಮೌನ... ಕತ್ತಲಾವರಿಸಿದ ಈ ರಾತ್ರಿಯ ತಣ್ಣಗಿನ ಮೂಕತೆ ನನ್ನನ್ನು ಹೆದರಿಸುತ್ತಿದೆ... ಮೇಜಿನ ಮೇಲೆ ಟೈಂಪೀಸ್ ಮಾತ್ರ ಸಮಯದ ಹೆಜ್ಜೆಗಳನ್ನು ಎಣಿಸುತ್ತಿದೆ.

ಹನ್ನೊಂದು ಗಂಟೆಗೆ ಅದು ಘಟಿಸಿದುದು. ಅದರ ಬಳಿಕ ಗಂಟೆಗಳ ಕಾಲ ನಾನು ಇಲ್ಲಿ ಕುಳಿತು ಬೇಯುತ್ತಿದ್ದೇನೆ... ಕೊನೆಗೆ ನಾನು ಈ ತೀರ್ಮಾನಕ್ಕೆ ಬಂದಿದ್ದೇನೆ. ಮರಣದ ನಿಶ್ಶಬ್ದದಲ್ಲಿ ಸೇರುವ ಮೊದಲು ಜಗತ್ತಿನ ಮುಂದೆ ಕಪ್ಪು ಪುಟಗಳನ್ನು ತೆರೆದು ತೋರಿಸಬೇಕೆಂದು ನಾನು ನಿಶ್ಚಯಿಸಿದ್ದು ಈಗ ಮಾತ್ರ...

ಬದುಕಿನ ಪುಟಗಳೊಂದೊಂದನ್ನೂ ತಿರುವಿ ಹಾಕಿದೆ.

ತಿಂಗಳಿಗೆ ಐದುನೂರು ರೂಪಾಯಿಗೂ ಹೆಚ್ಚು ಸಂಬಳ ಪಡೆಯುವ ನೌಕರನೊಬ್ಬನ ಮಗ. ಅವರು ಊರಿನ ಪ್ರಮುಖ ವ್ಯಕ್ತಿ. ಅವರ ಹೆಸರನ್ನು ಉಳಿಸಬೇಕಾದವ ನಾನು...

ಇದೆಲ್ಲವೂ ನಿಮಗೆ ತಿಳಿದಿದೆ. ಆದರೂ ನಾನು ಬರೆಯುತ್ತಿದ್ದೇನೆ...

ಸಮೃದ್ಧಿಯ ಮಡಿಲಲ್ಲಿ ಮಲಗಿ ನಾನು ಇಂದಿನವರೆಗೂ ಬೆಳೆದೆ. ಕಷ್ಟಪಾಡುಗಳ ಕರಿನೆರಳುಗಳು ನನ್ನ ಬದುಕಿನಲ್ಲಿ ಒಮ್ಮೆಯೂ ಸುಳಿಯಲಿಲ್ಲ. ಮನೆಯವರ ಹಾಗೂ ಊರವರ ಕಣ್ಣಿನಲ್ಲಿ ನಾನು ಒಳ್ಳೆಯವನಾಗಿದ್ದೆ... ಆದರೆ, ಮಿತ್ರಾ, ನನ್ನ ಬದುಕು ಒಂದು ಒಗಟು?...

ಬಿಸಿಲು ಮಂದವಾದ ಸಾಯಂಕಾಲಗಳಲ್ಲಿ ಮೈದಾನದ ಮೂಲೆಯೊಂದರಲ್ಲಿ ನಾವು ಗಂಟೆಗಳ ಕಾಲ ವಾದ ಪ್ರತಿವಾದಗಳನ್ನು ನಡೆಸಿದ್ದನ್ನು ಈಗ ನೆನಪು ಮಾಡಿಕೊಳ್ಳುತ್ತಿದ್ದೇನೆ... ಪ್ರೇಮ, ಸದಾಚಾರಗಳೇ ಬಹುತೇಕ ಹೆಚ್ಚಿನ ಸಂದರ್ಭದ ವಿಷಯಗಳು...

ಪ್ರೇಮವು ಪವಿತ್ರವೂ ದಿವ್ಯವೂ ಎಂದು ನೀವು ಹೇಳುತ್ತಿದ್ದೀರಲ್ಲವೇ. ನಾನು ಅವಜ್ಞೆಯಿಂದಲೇ ನಿಮ್ಮ ಈ ಅಭಿಪ್ರಾಯಗಳನ್ನು ಸ್ವೀಕರಿಸಿದ್ದೆ. ನೀವು ಹಲವು ಬಾರಿ ಪುನರಾವರ್ತಿಸುತ್ತಿದ್ದ ಒಂದು ಮಾತು ನನ್ನ ನೆನಪುಗಳಲ್ಲಿ ಮೇಲೆದ್ದು ಬರುತ್ತಿದೆ: 'ಪ್ರೇಮವಿದೆ.' ಅಂದು ನಾನದನ್ನು ಕೇಳಿಸಿಕೊಳ್ಳುವಾಗ ನನಗೆ ನಗು ಬರುತ್ತಿತ್ತು.

ಪ್ರೇಮದ ಕುರಿತಾದ ನನ್ನ ತರ್ಕ ಬೇರೆಯೇ ಆಗಿತ್ತು. ನೀವು ಹೇಳುವ ಮಹತ್ವವೊಂದೂ ಅದಕ್ಕಿಲ್ಲ. ಮಾಂಸ ಮಾಂಸಗಳು ತಮ್ಮೊಳಗೆ ಸೇರಲಿರುವ ಅಭಿಲಾಷೆ... ಅಷ್ಟು ಮಾತ್ರವೇ ನಾನು ತಿಳಿದಿರುವುದು.

ಇದುವರೆಗೆ ಬದುಕಿನಲ್ಲಿ ತುಂಬಾ ಹೆಣ್ಣುಗಳ ಜೊತೆ ಸಂಬಂಧ ಬೆಳೆಸಿದ್ದೇನೆ. ಸ್ಪಷ್ಟವಾಗಿ